ಶೂನ್ಯ ಪಟ್ಟಿಯ ಪ್ರಶ್ನೋತ್ತರಗಳು

ನಗರ ಸಭೆ ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್.ಗೆ ವಂತಿಕೆ ನೀಡುವ ಬಗ್ಗೆ

೨೭೧. ಶ್ರೀ ಟಿ. ಎಸ್. ವಣಿ (ಕೆ. ಜಿ. ಎಫ್).— ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೮-೮೯ನೇ ಸಾಲಿಗೆ ರಾಜ್ಯದಲ್ಲಿರುವ ಪುರಸಭೆಗಳಿಗೆ ಹಂಚಲಾಗಿರುವ ಅನುದಾನವೆಷ್ಟು ಹಾಗೂ ಕೋಲಾರ ಜಿಲ್ಲೆಗೆ ವೈಕ್ತೇಕವಾಗಿ ಹಂಚಿರುವ ಅನುದಾನವೆಷ್ಟು ?

ಆ) ಇತರೆ ಪುರ ಸಭೆಗಳು ಅನುದಾನವನ್ನು ಕಾಲಕ್ಕೆ ಸರಿಯಾಗಿ ಪಡೆಯುತ್ತಿದ್ದು, ೧೯೮೭-೮೮ ಮತ್ತು ೧೯೮೮-೮೯ನೇ ಸಾಲಿಗೆ ರಾಬರ್ಟ್‌ಸನ್ ಪೇಟೆ ನಗರ ಸಭೆಗೆ ಅನುದಾನವನ್ನು ಒದಗಿಸದಿರುವುದಕ್ಕೆ ಕಾರಣವೇನು?

ಇ) ನಗರಸಭೆ, ರಾಬರ್ಟ್‌ಸನ್ ಪೇಟೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಮೀಸಲು ಹಣ ಶೇಕಡ ೧೮ನ್ನು ಖರ್ಚು ಮಾಡುವುದಕ್ಕೂ ಕೂಡ ಹಣವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೧೯೮೮-೮೯ನೇ ಸಾಲಿಗೆ ರಾಜ್ಯದಲ್ಲಿರುವ ಎಲ್ಲಾ ಪುರಸಭೆಗೆ ರೂ. ೫೧,೯೮ ಸಾ೦,೦೬೯.೦೦ಗಳ ಆಕ್ಟ್ರಾಯ್ ಅನುದಾನವನ್ನು ಹಂಚಲಾಗಿದೆ, ಈ ಮೊತ್ತದಲ್ಲಿ ರೂ. ೬೯,೫೦,೮೬೮-೦೦ನ್ನು ಕೋಲಾರ ಜಿಲ್ಲೆಗೆ ಹಂಚಲಾಗಿದೆ.

ಆ) ರಾಬರ್ಟ್‌ಸನ್ ಪೇಟೆ ನಗರಸಭೆಗೆ ಆಕ್ಟ್ರಾಯ್ ಅನುದಾನದ ಹಣವನ್ನು ಪದ್ಧತಿಗನುಸಾರವಾಗಿ ಇತರ ಪುರಸಭೆಗಳೊಂದಿಗೆ ಬಿಡುಗಡೆ ಮಾಡಲಾಗಿದೆ.

ಇ) ೧೯೮೮-೮೯ನೇ ಸಾಲಿಗೆ ನಗರಸಭೆ ರಾಬರ್ಟ್‌ಸನ್ ಪೇಟೆಯು ಮೀಸಲು ಹಣ ಶೇಕಡ ೧೮ ರಡಿಯಲ್ಲಿ ರೂಪಾಯಿ ೨.೨೧.೧೬೦.೦೦ಗಳಿಗೆ ಅವಕಾಶ ಕಲ್ಪಿಸಿದೆ.

ಮಂಡಲ ಪಂಚಾಯಿತಿಗಳಿಂದ ಅಭಿವೃದ್ಧಿ ಕಾರ್ಯಗಳ ಮೇಲಿನ ವೆಚ್ಚ

೭೭. ಶ್ರೀ ಬಿ. ಜಿ. ಜವಳಿ (ಮುಧೋಳ್).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಪಕ್ಷ ಪಂಚಿತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಪ್ರತಿ ಮಂಡಲ ಪಂಚಾಯ್ತಿಗಳಿಗೆ ಹದಿನೈದು ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟು ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ವೆಚ್ಚ ಮಾಡಬಾರದೆಂದೇನಾದರೂ ಕಾನೂನು ಇದೆಯೇ?

ಆ) ಹಾಗಿದ್ದರೆ ಮಂಡಲ ಪಂಚಾಯ್ತಿಗಳ ಸಿಬ್ಬಂದಿಯ ವೆಚ್ಚವೇ ಹದಿನೈದು ಸಾವಿರಗಳಿಗಿಂತ ಹೆಚ್ಚಿಗೆ ಇದ್ದರೆ ಅಭಿವೃದ್ಧಿ ಕೆಲಸಗಳಿಗೆ ದೊರೆಯುವ ಹಣದ ಮೊತ್ತವೆಷ್ಟು?

ಇ) ಈ ದ್ವಿಮುಖ ನೀತಿಯ ವ್ಯವಸ್ಥೆಯಿಂದ ಮಂಡಲ ಪಂಚಾಯ್ತಿಗಳ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆ ಆಗುವುದರಿಂದ ಈ ವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ಮತ್ತು ಆ) ಮಂಡಲ ಪಂಚಾಯತಿ ಅಕೌಂಟ್ ನಂ. ೧ರಲ್ಲಿ ಪ್ರತಿಯೊಂದು ಮಂಡಲ ಪಂಚಾಯತಿ ರೂ. ೧೫,೦೦೦-೦೦ಗಳವರೆಗೆ ಪ್ರತಿ ತಿಂಗಳು ಹಣವನ್ನು ತೆಗೆಯಲು ಸುತ್ತೋಲೆ ಮೂಲಕ ಪರವಾನಿಗೆ ನೀಡಲಾಗಿದೆ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.